# ❋ ಸಚಿತ್ರ ಕೈಲಾಸ ಯಾತ್ರೆ ❋

**ಸ್ವಾಮಿ ಅನುಪಮಾನಂದ**

ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ಅನುಪಮಾನಂದಜಿ ಅವರು ಕೈಲಾಸ ಮತ್ತು ಮಾನಸಸರೋವರ ಯಾತ್ರೆಯ ವಿವರಗಳನ್ನು ಛಾಯಾಚಿತ್ರಗಳ ಮೂಲಕ ವಿವರಿಸುತ್ತ ಕಠಿಣವಾದ ಯಾತ್ರೆಯನ್ನು ಸುಸೂತ್ರವನ್ನಾಗಿ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ.


**ಕೈಲಾಸ** ಮತ್ತು ಮಾನಸಸರೋವರ ಯಾತ್ರೆಯು ಹಿಂದುಗಳಿಗೆ ಅತಿ ಪವಿತ್ರವಾದದ್ದು. ಶಿವ-ಪಾರ್ವತಿಯರು ಕೈಲಾಸದಲ್ಲಿ ಸದಾ ನೆಲೆಸಿರುತ್ತಾರೆ ಮತ್ತು ದೇವತೆಗಳು ಮಾನಸ ಸರೋವರದಲ್ಲಿ ನಿತ್ಯ ಸ್ನಾನ ಮಾಡುತ್ತಾರೆ ಎಂಬುದು ಅನಾದಿ ಕಾಲದಿಂದ ಬಂದ ನಂಬಿಕೆ. ಟಿಬೇಟಿನಲ್ಲಿರುವ ಕೈಲಾಸ-ಮಾನಸ ಸರೋವರ ಪ್ರಾಂತ್ಯವು ಪ್ರಸ್ತುತ ಚೀನಾ ದೇಶದ ಆಡಳಿತಕ್ಕೆ ಒಳಪಟ್ಟಿದೆ. ೨೦೦೪ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಮುಂಬೈ ಶ್ರೀರಾಮಕೃಷ್ಣ ಮಠದ ಸ್ವಾಮಿ ಧ್ರುವೇಶಾನಂದಜಿ ಅವರೊಂದಿಗೆ ಕೈಲಾಸ ಮಾನಸಸರೋವರ ಯಾತ್ರೆ ಮಾಡುವ ಸೌಭಾಗ್ಯ ನನ್ನದಾಗಿತ್ತು. ನೇಪಾಳದ ರಾಜಧಾನಿ ಕಟ್ಮಂಡು ಮತ್ತು ಟಿಬೇಟಿನ ರಾಜಧಾನಿ ಲ್ಹಾಸಾ ಮೂಲಕ ನಾವು ಕೈಲಾಸಯಾತ್ರೆ ಕೈಗೊಂಡೆವು.



ನೇಪಾಳದ ರಾಜಧಾನಿ ಕಟ್ಮಂಡುವಿನಲ್ಲಿ ಪುರಾಣ ಪ್ರಸಿದ್ಧ ನೇಪಾಳದ ರಾಜರ ಆರಾಧ್ಯ ದೈವನಾದ ಪಶುಪತಿನಾಥನ ಶಿವಮಂದಿರವಿದೆ. ಅದು ಭಾಗಮತಿ ನದಿಯ ತೀರದಲ್ಲಿದ್ದು ಸದಾ ಯಾತ್ರಿಗಳಿಂದ ತುಂಬಿರುತ್ತದೆ.



ಕಟ್ಮಂಡುವಿನಲ್ಲಿ ಬೌದ್ಧದೇವಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆ. ಪಟ್ಟಣದ ಥಾಮೆಲ್ ಪ್ರದೇಶದ ಪರ್ವತದ ಬುಡದಲ್ಲಿ ಇರುವ ಸುವರ್ಣವರ್ಣದ ಈ ಬುದ್ಧನ ವಿಗ್ರಹವು ಸುಮಾರು ೬೦ ಅಡಿ ಎತ್ತರವಿದೆ.



೧೩ನೇ ಶತಮಾನದಲ್ಲಿ ನಿರ್ಮಾಣಗೊಂಡ ಈ ಪೋಟಾಲಾ ಅರಮನೆಯಲ್ಲಿ ಬೌದ್ಧರ ಮಠವೂ ಇದೆ. ಚೀನಿಯರ ವಶವಾಗುವ ತನಕ ಇದು ಟಿಬೇಟ್‌ನ ಆಡಳಿತ ಕೇಂದ್ರವಾಗಿತ್ತು. ಏಳು ಅಂತಸ್ತಿನ ಈ ಕಟ್ಟಡದಲ್ಲಿ ೧೦೦೦ ಕೊಠಡಿಗಳಿವೆ. ಬೌದ್ಧಧರ್ಮದ ಗ್ರಂಥಗಳನ್ನು ಇಲ್ಲಿ ರಕ್ಷಿಸಿ ಇಡಲಾಗಿದೆ.



ಪೋಟಾಲಾ ಅರಮನೆಯಲ್ಲಿ ಇರುವ ಒಂದು ಬುದ್ಧನ ಮಂದಿರ. ಈ ಮಂದಿರದ ಒಳಗೆ ೩೦ ಅಡಿ ಎತ್ತರದ ಪಂಚಲೋಹದ ಬುದ್ಧನ ಮೂರ್ತಿ ಇದೆ. ಇಂತಹ ಏಳೆಂಟು ಮಂದಿರಗಳು ಪೋಟಾಲಾ ಅರಮನೆಯಲ್ಲಿ ಇವೆ.



ಲ್ಹಾಸಾದಿಂದ ಕೈಲಾಸದೆಡೆಗೆ ಪ್ರಯಾಣ. ದಾರಿಯಲ್ಲಿ ಲಾತ್ಸೆಯಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತಿತ್ತು. ಲಾಮಾಗಳು ಚಿತ್ರ-ವಿಚಿತ್ರವಾದ ವೇಷ ಮತ್ತು ಮುಖವಾಡಗಳನ್ನು ಧರಿಸಿ ಹೆಜ್ಜೆಹಾಕುತ್ತ ನರ್ತಿಸುತ್ತಿದ್ದರು.



ಮಠಗಳ ಮತ್ತು ದೇವಾಲಯಗಳ ಗೋಡೆಗಳ ಮೇಲೆ ಕಂಡು ಬರುವ ಸಸ್ಯ ಜನ್ಯ ಬಣ್ಣಗಳಿಂದ ಪರಿಣತ ಲಾಮಾಗಳು ಬಿಡಿಸಿದ ತೈಲಚಿತ್ರ. ಇದು ಸುಮಾರು ೧೦೦ ವರ್ಷ ಹಳೆಯದೆಂದು ಸ್ಥಳೀಯರು ಹೇಳುತ್ತಾರೆ.



ಹೋರೆ ಎಂಬಲ್ಲಿ ಪವಿತ್ರ ಮಾನಸ ಸರೋವರದ ಪ್ರಥಮ ದರ್ಶನ. ಆಚೆಯ ತೀರದ ದಿಗಂತದಲ್ಲಿ ಕೈಲಾಸದ ದರ್ಶನ ಯಾತ್ರಿಗಳನ್ನು ಪುಳಕಗೊಳಿಸುತ್ತದೆ. ಮೂವರು ಲಾಮಾಗಳನ್ನೂ ಕಾಣಬಹುದು.




ಮಾನಸ ಸರೋವರದಲ್ಲಿ ಸೂರ್ಯೋದಯದ ಸೊಬಗು.



ಕೈಲಾಸ ಪರ್ವತದ ಬುಡದಲ್ಲಿ ಇರುವ ತಾರ್ಚೆನ್ ಎನ್ನುವ ಊರಿನಿಂದ ಕೈಲಾಸ ಪತಿಯ ದರ್ಶನ.



ಪ್ರದಕ್ಷಿಣೆಯ ಮಾರ್ಗದಲ್ಲಿ ಪಶ್ಚಿಮ ದಿಕ್ಕಿನಿಂದ ಕೈಲಾಸಪತಿಯ ದರ್ಶನ. ಇಲ್ಲಿ ಕೈಲಾಸಪತಿಯ ತಲೆ ಆಕಾಶವನ್ನು ಚುಂಬಿಸಿದಂತೆ ಕಾಣುತ್ತದೆ. ಮೊದಲನೆಯ ದಿನ ಕೈಲಾಸಪತಿಯ ದರ್ಶನ ಸದಾ ಆಗುತ್ತಿರುತ್ತದೆ.



ಮಾನಸ ಸರೋವರದ ದಕ್ಷಿಣ ತೀರದಲ್ಲಿರುವ ಚು ಗುಂಫಾ ಎನ್ನುವ ಬೌದ್ಧ ಮಠ ಮತ್ತು ಸ್ತೂಪ. ಹಿಂದೆ ಭಾರತದಿಂದ ಕೈಲಾಸ ಯಾತ್ರೆಗೆ ಬಂದ ಯಾತ್ರಿಗಳು ಈ ಮಠದಲ್ಲಿ ಕೆಲವು ದಿನ ತಂಗಿದ್ದು ಮುಂದೆ ಹೋಗುತ್ತಿದ್ದರಂತೆ.



ಸಮುದ್ರಮಟ್ಟದಿಂದ ೧೪,೯೦೦ ಅಡಿಎತ್ತರದಲ್ಲಿನ ಮಾನಸ ಸರೋವರದಲ್ಲಿ ಸ್ನಾನಮಾಡಿದಾಗ ತನುಮನಗಳು ಪಾವನಗೊಳ್ಳುತ್ತವೆ; ಮಂಜುಗಡ್ಡೆಯಂತೆ ಇರುವ ತಣ್ಣೀರು ಎಂಥವರನ್ನೂ ನಡುಗಿಸುತ್ತದೆ.




ಅಷ್ಟಪಾದ ಎಂಬಲ್ಲಿಂದ ಕೈಲಾಸ ದರ್ಶನ. ಋಷಿ-ಮುನಿಗಳು ತಪಸ್ಸು ಮಾಡಿದ ಸ್ಥಳವಿದು. ಪಕ್ಕದಲ್ಲಿ ಕಾಣುವುದು ನಂದಿ. ಕೈಲಾಸಪತಿಯ ಈ ಮುಖಕ್ಕೆ ದಕ್ಷಿಣಾಮೂರ್ತಿ ಎಂದು ಹೆಸರು.



ಉತ್ತರದಲ್ಲಿ ದೆಹರಾ ಫ್ರುಕ್ ಎನ್ನುವ ಬೌದ್ಧ ಮಠದಿಂದ ಕೈಲಾಸ ದರ್ಶನ. ಅದು ಸಮುದ ಮಟ್ಟದಿಂದ ಸುಮಾರು ೧೬,೫೦೦ ಅಡಿ ಎತ್ತರದಲ್ಲಿ ಇದೆ. ಇಲ್ಲಿಂದ ಕೈಲಾಸಪತಿಯನ್ನು ದರ್ಶಿಸುವುದು ಒಂದು ಅವಿಸ್ಮರಣೀಯ ಅನುಭವ.



ದೇಪರಾ ಪ್ರಕ್‌ನಲ್ಲಿ ಕೈಲಾಸಪತಿ ಸಾನ್ನಿಧ್ಯದಲ್ಲಿ ಪೂಜೆ ಮತ್ತು ಹೋಮ. ಸ್ಥಳೀಯರು ಕುತೂಹಲದಿಂದ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಸನ್ಯಾಸಿಗಳನ್ನು ಈ ಜನ ಲಾಮಾ ಎಂದು ಕರೆಯುತ್ತಾರೆ.



ಉದಯರವಿಯ ಕಿರಣಗಳು ಕೈಲಾಸಪತಿಗೆ ಬಂಗಾರದ ಮುಕುಟ ತೊಡಿಸಿವೆ. ಸ್ವಚ್ಛ ಆಕಾಶ ಮತ್ತು ಅನುಕೂಲ ಹವಾಮಾನ ಕೈಲಾಸ ಯಾತ್ರೆಯ ಯಶಸ್ಸಿಗೆ ಮುಖ್ಯ ಕಾರಣ.



ಡೋಲ್ಮಾಲಾ ಪಾಸ್. ಇದು ಸಮುದ್ರಮಟ್ಟದಿಂದ ೧೮,೬೦೦ ಅಡಿ ಎತ್ತರದಲ್ಲಿ ಇದೆ. ಟಿಬೇಟನ ಬೌದ್ಧರಿಗೆ ಇದೊಂದು ಪವಿತ್ರ ತಾಣ. ಇಲ್ಲಿ ಅನೇಕರಿಗೆ ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತದೆ.



ಇದೊಂದು ಹಿಮಗಡ್ಡೆ. ೫೬ ಕಿ.ಮೀ. ಉದ್ದದ ಪರಿಕ್ರಮ ಮಾರ್ಗದಲ್ಲಿ ಇಂತಹ ಹಲವಾರು ಹಿಮಗಡ್ಡೆಗಳನ್ನು ದಾಟಿ ಹೋಗಬೇಕು.



ಕೈಲಾಸಪರ್ವತಕ್ಕೆ ಪ್ರದಕ್ಷಿಣೆ ಹಾಕುತ್ತ ಪೂರ್ವದಿಕ್ಕಿಗೆ ಬಂದಾಗ ದೊಡ್ಡ ದೊಡ್ಡ ಪರ್ವತಗಳ ಹಿಂದೆ ಕೈಲಾಸಪತಿ ಮರೆಯಾಗುತ್ತಾನೆ. ಅಪರೂಪಕ್ಕೆ ಒಮ್ಮೆ ಆತನ ದರ್ಶನವಾದಾಗ ತೆಗೆದ ಚಿತ್ರ.



ಕೈಲಾಸ ಯಾತ್ರೆಯನ್ನು ಮುಗಿಸಿ ಹಿಂದಿರುಗುವಾಗ ಸಾಗಾ ಎನ್ನುವ ಸ್ಥಳದಲ್ಲಿ ಬ್ರಹ್ಮಪುತ್ರ ನದಿಯನ್ನು ದಾಟಿದೆವು. ಸೇತುವೆ ಇಲ್ಲದಿದ್ದುದರಿಂದ ಬಾರ್ಜ್ ಮೂಲಕ ದಾಟಿದೆವು. ಮಳೆಯಿಂದ ನೆರೆ ಬಂದಾಗ ನದಿಯನ್ನು ದಾಟುವುದು ಅಸಾಧ್ಯ.



ನೇಪಾಳದ ಗಡಿಯಲ್ಲಿ ಇರುವ ಝಾಂಗ್ಮು ಎನ್ನುವ ಪಟ್ಟಣ. ಪರ್ವತದ ದಕ್ಷಿಣ ದಿಕ್ಕಿನ ಇಳಿಜಾರಿನಲ್ಲಿ ನೋಡಲು ಬಹಳ ಸುಂದರವಾಗಿ ಕಾಣುತ್ತದೆ.



ಕಡಾರಿಯಲ್ಲಿ ಸ್ನೇಹಸೇತುವೆ ದಾಟಿ ನೇಪಾಳವನ್ನು ಪ್ರವೇಶಿಸಿದಾಗ ಕಂಡುಬರುವ ಹರಿದ್ವರ್ಣದ ಕಾಡಿನಿಂದ ತುಂಬಿದ ಬೆಟ್ಟಗುಡ್ಡಗಳ ಮತ್ತು ಜಲಪಾತಗಳ ದೃಶ್ಯ ನಯನಮನೋಹರವಾಗಿತ್ತು. ✪